ದಿನಾಂಕಃ 10-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಚಂದ್ರಶೇಖರ್ ಯಾರು ಎಂದು ನನಗೆ ಗೊತ್ತಿಲ್ಲ. ಶೇರ್ ವ್ಯವಹಾರ ಮಾಡುತ್ತಿದ್ದ ಚಂದ್ರಶೇಖರ್ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರು ನನ್ನ ಗಂಡನಿಗೆ ತುಂಬಾ ಆತ್ಮೀಯರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ನನ್ನ ಗಂಡನಲ್ಲಿ ಕೇಳಿ ತಿಳಿಯಲು ಪ್ರಯತ್ನಪಟ್ಟಿರುವುದಿಲ್ಲ. ಪ್ರತಾಪ್ ಸಿಂಹರವರ ಬಗ್ಗೆ ನನಗೆ ಮಾತನಾಡಿ ಪರಿಚಯ ಇಲ್ಲ. ಆದರೆ, ನನ್ನ ಅಣ್ಣ ಮಾತನಾಡಿಸಿರುತ್ತಾರೆ. ಟಿ.ವಿ9 ರಿಪೋರ್ಟರ್ ಸುನೀಲ್ ಹೆಗ್ಗರವಳ್ಳಿರವರು ನನಗೆ ಪರಿಚಯಸ್ಥರು ಅಲ್ಲ. ಸದರಿಯವರು ನನ್ನ ಗಂಡನಿಗೆ ಪರಿಚಯಸ್ಥರು ಎಂದರೆ ಸಾಕ್ಷಿದಾರರು ಅವರಿಗೆ ಪರಿಚಯಸ್ಥರು ಇರಬಹುದು, ಆದರೆ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಾಪರವರು ಎಂ.ಪಿ ಆಗಿದ್ದ ಸಮಯದಲ್ಲಿ ನನ್ನ ಅಣ್ಣನ ಕಡೆಯಿಂದ ಎಸ್.ಪಿ ಅಣ್ಣಾ ಮಲೈರವರಿಗೆ ಹಣಕಾಸಿನ ವ್ಯವಹಾರದ ಬಗ್ಗೆ ಮಾತನಾಡಿಸಿದ್ದರು ಎಂದರೆ ಸರಿ. ಅದೇ ರೀತಿ ಸುನೀಲ್ ಹೆಗ್ಗರವಳ್ಳಿರವರು ಎಸ್.ಪಿ ಅಣ್ಣಾಮಲೈರವರಿಗೆ ಫೋನ್ ಮಾಡಿ ನಮ್ಮ ಪರವಾಗಿ ಮಾತನಾಡಲು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಾಪಸಿಂಹರವರ ಪ್ರಭಾವವನ್ನು ಬಳಸಿ ನಮ್ಮನ್ನು ಎಸ್.ಪಿ ಕಛೇರಿಗೆ ಕರೆಸಿದ್ದರು ಎಂದರೆ ನನ್ನ ಅಣ್ಣ ಮಾತನಾಡಿರುತ್ತಾರೆ, ನಾನು ಮಾತನಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು, ನನ್ನ ಗಂಡ ಹಾಗೂ ನನ್ನ ಅಣ್ಣ ಎಲ್ಲರೂ ಒಳ್ಳೆಯ ಭಾಂದವ್ಯದಲ್ಲಿ ಇದ್ದೆವು ಎಂದರೆ ಸರಿ. ಎಸ್.ಪಿ ಅಣ್ಣಾಮಲೈರವರು ನಮ್ಮನ್ನು ಕರೆಸಿ, ಆರೋಪಿಯನ್ನೂ ಕೂಡಾ ಕರೆಸಿ ನಾವು ಪೇಪರ್ ಅನ್ನು ರೆಡಿ

ಮಾಡಿಸಿಕೊಂಡಿದ್ದು ಅದಕ್ಕೆ ಆರೋಪಿಯು ಸಹಿಯನ್ನು ಮಾಡಿ ಮುಗಿಸಬೇಕು ಎಂದು ಹೇಳಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಆದರೆ ಹೆದರಿಸಿರುವುದಿಲ್ಲ. ಆ ಸಮಯದಲ್ಲಿ ಆರೋಪಿಗೆ ಮಾತನಾಡಲು ಅವಕಾಶ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಎಸ್.ಪಿ ಕಛೇರಿಯಲ್ಲಿ ಎಷ್ಟು ಸಮಯ ಮಾತನಾಡಿರುತ್ತೇವೆ ಎಂದು ಹೇಳಲು ನನಗೆ ಆಗುವುದಿಲ್ಲ.

ನಾವು ದಿಃ31.05.2018 ರಂದು ಎಸ್.ಪಿ ಕಛೇರಿಗೆ ಹೋಗಿದ್ದೆವು. ಪ್ರತಾಪ್ ಸಿಂಹರವರ ಪ್ರಭಾವವನ್ನು ಬಳಸಿ ಆರೋಪಿಯ ಯಾವುದೇ ಮಾತನ್ನು ಕೇಳದೆ ಅವರಿಗೆ ತಾಕೀತು ಮಾಡಿ ಅವರಿಂದ ನಿಪಿ-1 ಚೆಕ್ಕು ಮತ್ತು ನಿಪಿ-6 ನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಎಸ್.ಪಿ ಅಣ್ಣಾಮಲೈ ಆರೋಪಿಯ ಮೇಲಾಧಿಕಾರಿಯಾಗಿದ್ದರು ಎಂದರೆ ಸರಿ. ಆರೋಪಿಗೆ ಬೆದರಿಕೆಯನ್ನು ಮಾಡಿ ರಾಜಕೀಯ ಪ್ರಭಾವವನ್ನು ಬಳಸಿ ನಿಪಿ-1 ಮತ್ತು 6 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ಸಂಬಂಧಿ ಚಂದ್ರಶೇಖರ್ ಹಾಗೂ ನನ್ನ ಗಂಡನ ನಡುವೆ ಶೇರ್ ವ್ಯವಹಾರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಚಂದ್ರಶೇಖರ್ ರವರು ಆರೋಪಿಯ ಅಕ್ಕನ ಮಗ ಎಂದರೆ ನನಗೆ ಗೊತ್ತಿಲ್ಲ. ಆರೋಪಿ, ಚಂದ್ರಶೇಖರ್ ಹಾಗೂ ನನ್ನ ಗಂಡ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ ಚಂದ್ರಶೇಖರ್ ರವರು ಆರೋಪಿಯ ಅಕ್ಕನ ಮಗ ಆಗಿದ್ದ ಕಾರಣ ಆರೋಪಿಯಿಂದ ಹಣವನ್ನು ಪಡೆಯಬಹುದು ಎನ್ನುವ ಉದ್ದೇಶದಿಂದ ಚಂದ್ರಶೇಖರ್ ರವರ ಬಳಿ ವ್ಯವಹಾರ ಇದ್ದರೂ ಕೂಡಾ ಆರೋಪಿಯ ಚೆಕ್ಕನ್ನು ಮತ್ತು ಅಗ್ರಿಮೆಂಟ್ ಅನ್ನು ದುರುದ್ದೇಶದಿಂದ ಪ್ರಭಾವ ಬಳಸಿ ಸೃಷ್ಟಿಸಿರುತ್ತೇವೆ

ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಜೊತೆಗೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ.

ನಿಪಿ-1 ಚೆಕ್ ಹಾಗೂ ನಿಪಿ-6 ಅಗ್ರಿಮೆಂಟ್ ಒಂದೇ ದಿನ ಆಗಿರುತ್ತದೆ ಎಂದರೆ ಸರಿ. ಸದರಿ ದಿನಾಂಕದಂದು ನಾವು ಆರೋಪಿಗೆ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿ. ನನ್ನ ಗಂಡ ಬದುಕಿದ್ದ ಸಮಯದಲ್ಲಿ 2 ರಿಂದ 3 ಬ್ಯಾಂಕ್ ಖಾತೆಯನ್ನು ಹೊಂದಿರಬಹುದು. ಅವರು ಐ.ಡಿ.ಬಿ.ಐ ಬ್ಯಾಂಕ್ ಮತ್ತು ನಿಡುವಾಳೆ ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದರು. ನನ್ನ ಗಂಡನ ಬ್ಯಾಂಕ್ ಖಾತೆಯ ಎಕ್ಸ್ ಟ್ರ್ಯಾಕ್ಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಆರೋಪಿಯು ಯಾವ ದಿನಾಂಕ, ತಿಂಗಳು ಹಾಗೂ ಇಸವಿಯಂದು ನಮ್ಮ ಬಳಿ ಹಣವನ್ನು ಕೇಳಿರುತ್ತಾರೆ ಎಂದು ಹಾಗೂ ನಾವು ಯಾವ ದಿನಾಂಕದಂದು ಹಣವನ್ನು ನೀಡಿರುತ್ತೇವೆ ಎಂದು ನಮ್ಮ ಪಿರ್ಯಾದಿಯಲ್ಲಿ ಆಗಲೀ, ನಮ್ಮ ನೋಟೀಸ್ ನಲ್ಲಿ ಆಗಲೀ ಅಥವಾ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಗಲೀ ತಿಳಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಜೀವಿತಾವಧಿಯಲ್ಲಿ ಈ ಪಿರ್ಯಾದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದುದರಿಂದ ಈ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಈ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ.

ರಾಜೀ ಸಂಧಾನ ಪತ್ರದಲ್ಲಿಯೂ ಕೂಡಾ ಈ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಹಣಕಾಸಿನ ವ್ಯವಹಾರ ಆಗುವ ಸಮಯದಲ್ಲಿ ನಾನು ಹಾಗೂ ದಯಾಕರ್ ಇದ್ದ ಬಗ್ಗೆ ಪಿರ್ಯಾದಿಯಲ್ಲಿ

ಆಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆಗಲೀ ಅಥವಾ ರಾಜೀ ಸಂಧಾನದಲ್ಲಿ ಆಗಲೀ ಇರುವುದಿಲ್ಲ ಎಂದರೆ ಸರಿ. ವೆಂಕಟೇಶ್ ರವರ ಪರಿಚಯ ಇರುತ್ತದೆ. ಚಂದ್ರಶೇಖರ್ ರವರ ಪರಿಚಯ ದಯಾಕರ್ ಮೂಲಕ ಆಗಿರುತ್ತದೆ ಎಂದರೆ ಸಾಕ್ಷಿದಾರರು ನಮಗೆ ಚಂದ್ರಶೇಖರ್ ರವರ ಪರಿಚಯ ಇರುವುದಿಲ್ಲ ಎಂದು ನುಡಿಯುತ್ತಾರೆ. ಪಾಲು ವಿಭಾಗದ ಮೂಲಕ ಒಟ್ಟು ಎಷ್ಟು ಎಕರೆ ಜಮೀನು ನಮಗೆ ಬಂದಿರುತ್ತದೆ ಎಂದು ನಮಗೆ ಈಗ ಹೇಳಲು ಆಗುವುದಿಲ್ಲ. ನಾನು ಆರೋಪಿಯ ಮನೆಗೆ ಹೋಗಿ ಮಾತನಾಡಲು ಪ್ರಯತ್ನಪಟ್ಟಿರುವುದಿಲ್ಲ. ಎಸ್.ಪಿ. ಕಛೇರಿಗೆ ಹೋಗಿ ಮಾತನಾಡಿರುತ್ತೇನೆ. ಆರೋಪಿಯು ಅದಕ್ಕಿಂತ ಪೂರ್ವದಲ್ಲಿ ನಮ್ಮ ಮನೆಗೆ ಬಂದು ಹೋಗುತ್ತಿದ್ದಾಗ ಮಾತನಾಡಿರುತ್ತೇನೆ. ಆರೋಪಿಗೆ ಹಣವನ್ನು ಚೆಕ್ ಮೂಲಕ ನೀಡಲು ನನ್ನ ಗಂಡನಿಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿಯು ಹಿಂದೆ ನಮ್ಮಿಂದ ಹಣವನ್ನು ಪಡೆದಿದ್ದಾರೆ ಎನ್ನುವ ಬಗ್ಗೆ ದಾಖಲಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಒಂದು ಅಗ್ರಿಮೆಂಟ್ ಅನ್ನು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಯು ಹಣವನ್ನು ಪಡೆದಿದ್ದಾರೆ ಎನ್ನುವ ಬಗ್ಗೆ ದಾಖಲೆಯು ಇರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನನ್ನ ಗಂಡನಿಗೆ ಗೊತ್ತಿದ್ದಿರಬಹುದು ಎಂದು ನುಡಿಯುತ್ತಾರೆ. ಈ ಬಗ್ಗೆ ನನ್ನ ಗಂಡನನ್ನು ಕೇಳಿ ತಿಳಿದುಕೊಂಡಿದ್ದೇನೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನನ್ನ ಸಮಕ್ಷಮದಲ್ಲಿ ಸದರಿ ಹಣವನ್ನು ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮುಂದೆ ಹಣವನ್ನು ಕೊಟ್ಟ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ.

ಎಸ್.ಪಿ ಯವರಿಗೆ ನಾವು ಲಿಖಿತವಾಗಿ ದೂರನ್ನು ನೀಡಿರುತ್ತೇವೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾವು ಆರೋಪಿಗೆ ಕಳುಹಿಸಿದ ನೋಟೀಸ್ ಆರೋಪಿಗೆ ತಲುಪಿರುವುದಿಲ್ಲ ಎಂದರೆ ಸಾಕ್ಷಿದಾರರು ಆರೋಪಿಯು ಅಗ್ರಿಮೆಂಟ್ ನಲ್ಲಿ ಕೊಟ್ಟ ವಿಳಾಸದಲ್ಲಿ ಇಲ್ಲದೇ ಇದ್ದುದರಿಂದ ಅವರಿಗೆ ತಲುಪಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಬೇರೆ ವಿಳಾಸವನ್ನು ನಾನು ತಿಳಿಯಲು ಪ್ರಯತ್ನಪಟ್ಟಿರುವುದಿಲ್ಲ. ಆದರೆ, ನನ್ನ ಅಣ್ಣ ಪ್ರಯತ್ನಪಟ್ಟಿರುತ್ತಾರೆ. ಈ ಹಣಕಾಸಿನ ವ್ಯವಹಾರದ ಬಗ್ಗೆ ನಾವು ಹೇಳಿದಷ್ಟು ಮಾತ್ರ ಗೊತ್ತಿರುತ್ತದೆ.

(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

C.C.No.67/2021
PW-2